

# ಎಂಡೊಮೆಟ್ರಿಯೋಸಿಸ್ ಸಂಕಟ

**ಮಹಿಳೆಯರಿಗೆ ತಮ್ಮ ಯಾತನಾಮಯ ಋತುಚಕ್ರದ ಹಿಂದಿರುವ ಕಾರಣದ ಬಗ್ಗೆ ಅರಿವಿರುವುದಿಲ್ಲ. ಋತುಚಕ್ರ ಸಮಸ್ಯೆ ಸರ್ವೇ ಸಾಮಾನ್ಯ ಎಂದು ತಿಳಿದು ಎಂಡೊಮೆಟ್ರಿಯೋಸಿಸ್ ಸಮಸ್ಯೆಯನ್ನು ವರ್ಷಗಟ್ಟಲೇ ಅನುಭವಿಸುತ್ತಾರೆ. ಇದು ಮಹಿಳೆಯರ ದಿನನಿತ್ಯ ಜೀವನದ ಮೇಲೆ ಪರಿಣಾಮ ಬೀರುವುದಷ್ಟೇ ಅಲ್ಲದೆ ಮಾನಸಿಕ ಸಮಸ್ಯೆಗಳಿಗೂ ಕಾರಣವಾಗುತ್ತದೆ.**

**■ ಉಮಾ ಅನಂತ್**

ಇಪ್ಪತ್ತೈದು ವರ್ಷದ ಸುಜಾತ ಕಂಪೆನಿಯೊಂದರಲ್ಲಿ ಉದ್ಯಮಿ. ಪ್ರತಿ ತಿಂಗಳ ಋತುಸ್ರಾವದ ಸಮಯದಲ್ಲಿ ಆಕೆಯ ಯಾತನೆ ಹೇಳತೀರದು. ವಿಪರೀತ ರಕ್ತಸ್ರಾವ, ಹೊಟ್ಟೆನೋವುಗಳಿಂದ ದೈಹಿಕವಾಗಿ ನಿತ್ರಾಣದ ಜತೆಗೆ ಮಾನಸಿಕವಾಗಿಯೂ ವಿಪರೀತ ಕಿರಿಕಿರಿ ಅನುಭವಿಸುತ್ತಾಳೆ ಆಕೆ. ವೈದ್ಯರನ್ನು ಸಂಪರ್ಕಿಸಿದಾಗ ಆಕೆಯನ್ನು ಪರೀಕ್ಷಿಸಿ ಎಂಡೊಮೆಟ್ರಿಯೋಸಿಸ್ ಸಮಸ್ಯೆಯನ್ನು ಪತ್ತೆ ಹಚ್ಚಿದರು. ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಮೂಲಕ ಪರಿಹಾರ ಕಂಡುಕೊಂಡಳು.

ಸಂತಾನ ಸಮಸ್ಯೆಯನ್ನೂ ಎದುರಿಸುತ್ತಿದ್ದ ಈ ಯುವತಿಗೆ ಐವಿಎಫ್ ಚಿಕಿತ್ಸೆಯನ್ನೂ ನೀಡಲಾಯಿತು. ಋತುಸ್ರಾವಕ್ಕೆ ಸಂಬಂಧಿಸಿದ ತೊಂದರೆ ಅನುಭವಿಸುತ್ತಿದ್ದರೂ ಆಕೆ ಉತ್ತಮ ಚಿಕಿತ್ಸೆ ಪಡೆದು ಗರ್ಭವನ್ನೂ ಧರಿಸುವಂತಾಯಿತು. ಆರೋಗ್ಯವಂತ ಮಗುವನ್ನು ಪಡೆದ ಸುಜಾತ ಈಗ ಎಂಡೊಮೆಟ್ರಿಯೋಸಿಸ್ ಸಮಸ್ಯೆಯಿಂದ ಮುಕ್ತಳಾಗಿದ್ದಾಳೆ.

ಹೆಣ್ಣು ಮಕ್ಕಳು ಸಾಮಾನ್ಯವಾಗಿ ಅನುಭವಿಸುವ ಸಮಸ್ಯೆಗಳಲ್ಲೊಂದು ಎಂಡೊಮೆಟ್ರಿಯೋಸಿಸ್. ಇದರ ಪತ್ತೆ ಸುಲಭದಲ್ಲಿ ಮತ್ತು ಬೇಗನೆ ಆಗದೇ ಇರುವ ಕಾರಣ ಅನೇಕ ಮಹಿಳೆಯರು ಋತುಸ್ರಾವದ ತೊಂದರೆ ಎಂದು ಚಿಕಿತ್ಸೆ ಪಡೆಯಲು ವಿಳಂಬ ಮಾಡುತ್ತಾರೆ. ಅಲ್ಲದೆ ಈ ರೋಗವನ್ನು ಬಹಳಷ್ಟು ವೇಳೆ ಮಹಿಳೆಯರು ತಡವಾಗಿ ಮತ್ತು ತಪ್ಪಾಗಿ ನಿರ್ಣಯಿಸುವುದೂ ಇದೆ. ಹೀಗಾಗಿ ರೋಗ ಉಲ್ಬಣವಾಗುವ ವೇಳೆಗೆ ಮಹಿಳೆ ಬಹಳ ಯಾತನೆ ಅನುಭವಿಸುವಂತಾಗುತ್ತದೆ.

‘ಎಂಡೊಮೆಟ್ರಿಯೋಸಿಸ್ – ಇದು ಹೆಣ್ಣುಮಗುವಿನ ಮೊದಲ ಋತುಚಕ್ರದಿಂದಲೇ ಪ್ರಾರಂಭವಾಗಬಹುದು ಮತ್ತು ಋತುಬಂಧದವರೆಗೂ ಆಕೆಯನ್ನು ಕಾಡಬಹುದು. ಇದರ ವಿರುದ್ಧದ ಹೋರಾಟದಲ್ಲಿನ ಪ್ರಮುಖ ಸವಾಲೆಂದರೆ ಈ ಸ್ಥಿತಿಯ ಬಗ್ಗೆ ಸಾಕಷ್ಟು ಜಾಗೃತಿ ಅಥವಾ ಅರಿವು ಇಲ್ಲದಿರುವುದು’ ಎಂದು ಹೇಳುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಡಾ. ಮನಿಷಾ ಸಿಂಗ್.

‘ಮಹಿಳೆಯರಿಗೆ ತಮ್ಮ ಯಾತನಾಮಯ ಋತುಚಕ್ರದ ಹಿಂದಿರುವ ಕಾರಣದ ಬಗ್ಗೆ ಅರಿವಿರುವುದಿಲ್ಲ. ಋತುಚಕ್ರ ಸಮಸ್ಯೆ ಸರ್ವೇ ಸಾಮಾನ್ಯ ಎಂದು ತಿಳಿದು ವರ್ಷಗಟ್ಟಲೇ ಅದನ್ನು ಅನುಭವಿಸುತ್ತಾರೆ. ಇದು ಕೇವಲ ಅವರ ದಿನನಿತ್ಯದ